**ಹಿರಿಯ ಸಿವಿಲ್ ನ್ಯಾಯಾಧೀಶರು**

**ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,**

**ಶಹಾಪೂರ**

RW.1

Crl. Misc. 178//2024

| | | |
|---|---|---|
| ಹೆಸರು | ಃ | ಯಮನಪ್ಪ |
| ತಂದೆಯ ಹೆಸರು | ಃ | ಅರ್ಜುನಪ್ಪ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ | ಃ | ಯಾದಗಿರಿ |

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 11-02-2026.**

**ಮುಖ್ಯ ವಿಚಾರಣೆ ಃ ಎದುರುದಾರರ ಪರ ಮಾನ್ಯ ವಕೀಲರಿಂದ:**

ನನ್ನ ಸ್ವಂತ ಊರು ತರ್ಕಾಸಪೇಟ. ಅರ್ಜಿದಾರರು ನನ್ನ ಹೆಂಡತಿ. ಅರ್ಜಿದಾರರು ನನ್ನ ತಾಯಿಯ ತಮ್ಮನ ಮಗಳು. ನನ್ನ ಹಾಗೂ ಅರ್ಜಿದಾರರ ಮದುವೆಯು ತರ್ಕಾಸಪೇಟ ಗ್ರಾಮದಲ್ಲಿರುವ ನನ್ನ ಮನೆಯ ಮುಂದೆ ದಿಃ 16-05-2009 ರಂದು ಆಗಿರುತ್ತದೆ. ನಮ್ಮ ಮದುವೆಯ ಸಂದರ್ಭದಲ್ಲಿ ನನ್ನ ಅತ್ತೆ ಮಾವ ಯಾವುದೇ ಬಂಗಾರ ಹಾಗೂ ಬೆಳ್ಳಿಯನ್ನು ಕೊಟ್ಟಿರುವುದಿಲ್ಲ. ಸದರಿ ಮದುವೆಯಾದ ನಂತರ ನಾನು ಹಾಗೂ ಅರ್ಜಿದಾರರು ಸುಮಾರು 14 ವರ್ಷಗಳವರೆಗೆ ಅನ್ಯೋನ್ಯವಾಗಿ ವೈವಾಹಿಕ ಜೀವನವನ್ನು ಮಾಡಿರುತ್ತೇವೆ. ನನ್ನ ಕುಟುಂಬದಲ್ಲಿ ನಾನು, ನನ್ನ ತಾಯಿ ಹಾಗೂ ಅರ್ಜಿದಾರರು ಮಾತ್ರ ಇದ್ದೇವು. ನನಗೆ ಒಬ್ಬ ಅಕ್ಕ ಇದ್ದು ಅವರನ್ನು ಓತಿನಮಠ ಗ್ರಾಮಕ್ಕೆ ಮದುವೆ ಮಾಡಿ ಕೊಡಲಾಗಿರುತ್ತದೆ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ನಾನು ಅವರಿಗೆ ಹೊಡೆ

ಬಡೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ಮನೆಯಿಂದ ಹೊರ ಹಾಕಿರುತ್ತೇನೆ ಎಂದು ಮಾಡಿರುವ ಆಪಾದನೆಗಳು ಸುಳ್ಳಾಗಿರುತ್ತವೆ. ನಾನು ಅರ್ಜಿದಾರರಿಗೆ ಅವರ ತವರು ಮನೆಯಿಂದ ಹೆಚ್ಚಿನ ಬಂಗಾರ ಹಾಗೂ ಹಣವನ್ನು ತರಲು ದೈಹಿಕ ಹಾಗೂ ಮಾನಸಿಕ ಹಿಂಸೆ ಮಾಡಿರುತ್ತೇನೆ ಎಂದು ಹೇಳಿರುವುದು ಸುಳ್ಳಾಗಿರುತ್ತದೆ.

2. ದಿಃ 21-06-2023 ರಂದು ನನ್ನ ಕೆಲಸಕ್ಕೆ ಎಂದು ಯಾದಗಿರಿಗೆ ಹೋಗಿದ್ದು ಮದ್ಯಾಹ್ನ 03.00 ಗಂಟೆಗೆ ಮನೆಗೆ ಮರಳಿ ಬಂದಾಗ ನನ್ನ ಮನೆಯಲ್ಲಿ ಅರ್ಜಿದಾರರು ಹಾಗೂ ರೆಡ್ಡೆಪ್ಪ ತಂದೆ ಸಾಬಣ್ಣ ಎನ್ನುವವರು ಜೊತೆಗೆ ಇರುವುದನ್ನು ನೋಡಿರುತ್ತೇನೆ. ಅರ್ಜಿದಾರರು ಸಾಕಷ್ಟು ಸಲ ಸದರಿ ರೆಡ್ಡೆಪ್ಪ ಇವರ ಜೊತೆಗೆ ಪೋನಿನಲ್ಲಿ ಮಾತನಾಡುತ್ತಿದ್ದು ನಾನು ಅವರಿಗೆ ತಿಳಿ ಹೇಳಿದ್ದರೂ ಕೂಡಾ ಅವರು ಅದನ್ನು ನಿರ್ಲಕ್ಷ್ಯ ಮಾಡಿರುತ್ತಾರೆ. ಅದೇ ದಿನ ನಾನು ಅರ್ಜಿದಾರರ ತಾಯಿಗೆ ಸದರಿ ವಿಚಾರವನ್ನು ತಿಳಿಸಿದಾಗ ಅವರು ತಮ್ಮ ಊರಿನ 4-5 ಜನರೊಂದಿಗೆ ಬಂದು ಪಂಚಾಯಿತಿ ಮಾಡಲು ಬಂದಿರುತ್ತಾರೆ. ಸದರಿ ನ್ಯಾಯ ಪಂಚಾಯತಿಯಲ್ಲಿ ಅರ್ಜಿದಾರರ ಮನೆಯವರು ಅರ್ಜಿದಾರರಿಗೆ ಬುದ್ದಿ ಹೇಳಿ ಕಳುಹಿಸಿಕೊಡುವುದಾಗಿ ಹೇಳಿ ಕರೆದುಕೊಂಡು ಹೋಗಿದ್ದು ಇವತ್ತಿನವರೆಗೂ ಅವರನ್ನು ನನ್ನ ಮನೆಗೆ ವಾಪಾಸ್ಸು ಕಳುಹಿಸಿರುವುದಿಲ್ಲ. ನಾನು ಅರ್ಜಿದಾರರನ್ನು ಇವತ್ತಿಗೂ ಕೂಡಾ ನನ್ನ ಮನೆಗೆ ಕರೆದುಕೊಂಡು ಬರಲು ಪ್ರಯತ್ನಪಟ್ಟಿರುವುದಿಲ್ಲ. ನಾನು ಈಗಲು ಅರ್ಜಿದಾರರನ್ನು ನನ್ನ ಮನೆಗೆ ಕರೆದುಕೊಂಡು ಹೋಗಲು ತಯಾರಿರುತ್ತೇನೆ. ನಾನು ಇನ್ನೊಂದು ಮದುವೆ ಮಾಡಿಕೊಂಡಿರುತ್ತೇನೆ ಎಂದು ಅರ್ಜಿದಾರರು ಹೇಳಿರುವುದು ಸುಳ್ಳಾಗಿರುತ್ತದೆ. ತರ್ಕಾಸಪೇಟೆಯಲ್ಲಿರುವ ಜಮೀನುಗಳಲ್ಲಿ 3 ಎಕರೆ ಜಮೀನನ್ನು ಅರ್ಜಿದಾರರು ನನ್ನ ಜೊತೆಗೆ ಇರುವಾಗಲೇ ನಾನು ಮಾರಾಟ ಮಾಡಿರುತ್ತೇನೆ ಹಾಗೂ ಕೂಲಿ ಕೆಲಸ ಬಂದರೆ ದಿನಕ್ಕೆ

ರೂ.400/- ಗಳ ಆದಾಯವನ್ನು ಮಾತ್ರ ಹೊಂದಿರುತ್ತೇನೆ. ಅರ್ಜಿದಾರರು ಹೇಳಿರುವಂತೆ ನನಗೆ ಯಾವುದೇ ಹೊಲ ಇರುವುದಿಲ್ಲ ಹಾಗೂ ಅದರಿಂದ ರೂ.8,00,000/- ಆದಾಯ ಬರುವುದಿಲ್ಲ ಹಾಗೂ ನಾನು ಚಾಲಕ ಕೆಲಸದಿಂದ ತಿಂಗಳಿಗೆ ರೂ.20,000/- ಆದಾಯವನ್ನು ಹೊಂದಿರುವುದಿಲ್ಲ ಅದ್ದರಿಂದ ಅರ್ಜಿದಾರರು ಕೇಳಿದಂತೆ ಜೀವನಾಂಶವನ್ನು ಕೊಡುವ ಸಾಮರ್ಥ್ಯ ಹೊಂದಿರುವುದಿಲ್ಲ.

**ಅರ್ಜಿದಾರರು ಹಾಗೂ ಅವರ ಪರ ಮಾನ್ಯ ವಕೀಲರು ಗೈರು ಹಾಜರಾಗಿದ್ದರಿಂದ ಸಾಕ್ಷಿಯ ಪಾಟಿ ಸವಾಲಿಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.